JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

ಜಗ್ಗಲಿ ಸಮುದಾಯದ ನ್ಯಾಯ ವ್ಯವಸ್ಥೆ

ಹನುಮಂತಪ್ಪ ಕೆ ಹೆಚ್
ಸಂಶೋಧನಾ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಮೊಬೈಲ್-೯೭೩೧೨೧೭೭೧
Email-hanu1771@gmail.com

ಪ್ರಸ್ತಾವನೆ

ಮಾನವರು ಉಗಮ ಹಾಗೂ ಅವನ ಹಂತ ಹಂತದ ಬದಲಾವಣೆ ಮತ್ತು ಬೆಳವಣಿಗೆಗಳನ್ನು ಕಾಲದಿಂದ ಕಾಲಕ್ಕೆ ನೋಡಿಕೊಂಡು ಬರಲಾಗಿದೆ. ಇವುಗಳಲ್ಲದೇ ಮಾನವರು ಗುಂಪಾಗಿ ಜೀವಿಸುವ ಕ್ರಮ, ವಿಧಾನ, ಆಹಾರ ಪದ್ಧತಿ ಇತ್ಯಾದಿಗಳ ಜೊತೆಗೆ ಅವರು ರೂಢಿಸಿಕೊಂಡು ಬಂದ ನಂಬಿಕೆ, ಸಂಪ್ರದಾಯ, ಆಚಾರ-ವಿಚಾರ, ರೀತಿ-ರಿವಾಜುಗಳು, ಉಪಜೀವನದ ಕಸುಬುಗಳು ಹಾಗೂ ಪರಂಪರೆಗಳು ಇವೆಲ್ಲ ವಿಷಯಗಳು ಸಮಾಜ ವಿಜ್ಞಾನ ಕ್ಷೇತ್ರದ ಬಹುಮುಖ್ಯ ಅಂಗವಾಗಿದೆ. ಅಲ್ಲದೇ ಇವು ಅಧ್ಯಯನ ಯೋಗ್ಯ ವಿಷಯವೂ ಆಗಿವೆ. ಇಂತಹ ವಿಸ್ತಾರವಾದ ಸಮಾಜ ವಿಜ್ಞಾನದ ವಿಷಯದಲ್ಲಿ ಒಂದಂಗವಾದ ನ್ಯಾಯಾಂಗ ವ್ಯವಸ್ಥೆಯ ಕುರಿತಂತೆ ಈ ಅಧ್ಯಯನವನ್ನು ರೂಪಿಸಲಾಗಿದೆ.

ಭಾರತೀಯ ಪ್ರಾಚೀನ ಪರಂಪರೆ ಹಾಗೂ ವೈವಿಧ್ಯಮಯ ಸಾಂಸ್ಕೃತಿಕ ಬದುಕಿನ ಜೊತೆಗೆ ಜೀವನದರ್ಶನವನ್ನು ರೂಪಿಸಿರುವ ಕಾರಣದಿಂದಾಗಿ ವಿಶ್ವದಲ್ಲಿ ಭಾರತಕ್ಕೆ ವಿಶೇಷ ಸ್ಥಾನಮಾನ ಹಾಗೂ ಮನ್ನಣೆ ಲಭಿಸಿದೆ. ಜಗತ್ತಿನ ಅನೇಕ ನಾಗರಿಕತೆಗಳ ಜೊತೆಗೆ ಭಾರತೀಯ ನಾಗರಿಕತೆಯನ್ನು ತುಲನಾತ್ಮಕವಾಗಿ, ವಿಶ್ಲೇಷಣಾತ್ಮಕವಾಗಿ ಹಾಗೂ ವೈಜ್ಞಾನಿಕವಾಗಿ ನೋಡಿದಾಗ ಭಾರತದ ಪರಂಪರೆ ಮಿಕ್ಕೆಲ್ಲ ಪರಂಪರೆಗಳ ಹೊರತಾಗಿ ವಿಶೇಷತೆ, ವೈವಿಧ್ಯತೆ ಹಾಗೂ ವಿಶಿಷ್ಟತೆಯಿಂದ ಕೂಡಿದೆ. ಈ ಹಿನ್ನೆಲೆಯಲ್ಲಿ ಭಾರತದ ಮಟ್ಟಿಗೆ ಅದರಲ್ಲೂ ನ್ಯಾಯ ನಿರ್ಣಯ ಇತ್ಯಾದಿ ಹುಟ್ಟಿದ, ಬೆಳವಣಿಗೆಯಾದ ಹಾಗೂ ನಂತರದಲ್ಲಿ ಆದ ಬದಲಾವಣೆಗಳನ್ನು ವಿಶ್ಲೇಷಿಸುವ ಮತ್ತು ನಿಷ್ಪಕ್ಷಪಾತವಾಗಿ ಅಧ್ಯಯನ ನಡೆಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಬುಡಕಟ್ಟುಗಳ ನ್ಯಾಯಪದ್ಧತಿಯ ಬಗ್ಗೆ ಐತಿಹಾಸಿಕ, ಸಾಂಪ್ರದಾಯಿಕ ಇಲ್ಲವೇ ಗ್ರಂಥಾಧಾರಿತ ನ್ಯಾಯ ಕಲ್ಪನೆ, ನ್ಯಾಯದಾನ ಹಾಗೂ ನ್ಯಾಯ ನಿರ್ಣಯ ಪ್ರಕ್ರಿಯೆಗಳ ಬಗ್ಗೆ ಪ್ರಾಚೀನ ಭಾರತೀಯರಿಗೆ ಅಗಾಧವಾದ ತಿಳುವಳಿಕೆಯಿತ್ತು. ಬುಡಕಟ್ಟುಗಳ, ಅರಸರ ವಂಶಾಡಳಿತ ಪರಂಪರೆಯಲ್ಲಿ ರೂಢಿಗತವಾಗಿ ಬಂದ ನ್ಯಾಯ ಪದ್ಧತಿಯನ್ನು ಅಭ್ಯಸಿಸುತ್ತಾ, ಬ್ರಿಟಿಷ್ ಆಳ್ವಿಕೆಯ ಗುಲಾಮಗಿರಿಯಲ್ಲಿ ಮತ್ತು ಮುಸ್ಲಿಂ ದಾಳಿಕೋರರ ಆಡಳಿತದ ಅವಧಿಯಲ್ಲಿನ ನ್ಯಾಯಪದ್ಧತಿಯಲ್ಲಿ ಆದ ಬದಲಾವಣೆಗಳನ್ನು ಗಮನಿಸಬೇಕಾಗುತ್ತದೆ. ಭಾರತ ಸ್ವತಂತ್ರವಾದ

ಘಳಿಗೆಯಲ್ಲಿ ರಚಿಸಿ, ನಿರ್ಣಯಿಸಿ, ಒಪ್ಪಿಕೊಂಡು ಜಾರಿಗೊಳಿಸಿದ ಭಾರತ ಸಂವಿಧಾನದಲ್ಲಿ ಅಡಕವಾಗಿರುವ ನ್ಯಾಯಾಂಗದ ಬಗ್ಗೆ ವಿಶೇಷವಾಗಿ ಭಾರತ ಸಂವಿಧಾನ ರೂಪಿಸಿರುವ ನ್ಯಾಯಾಂಗ ಪದ್ಧತಿಯು ಪ್ರಾಚೀನ ಭಾರತೀಯ ನ್ಯಾಯ ಪದ್ಧತಿಯ ಅಂಶಗಳನ್ನು ಒಳಗೊಂಡಿತ್ತೇ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಅನುಸರಿಸಿಕೊಂಡು ಬಂದ ನ್ಯಾಯ ಪದ್ಧತಿಯಲ್ಲಿ ಸ್ಪಷ್ಟವಾಗಿ ಕಂಡುಬರುವ ಅಸಮಾನತೆ, ಏಕಪಕ್ಷೀಯ ನಿರ್ಣಯ, ರಾಜಾಜ್ಞೆಯೇ ಅಂತಿಮ ಎಂಬ ಇತ್ಯಾದಿ ಶತಮಾನದ ಅನ್ಯಾಯವನ್ನು ಹೋಗಲಾಡಿಸಿ, ಬಹುಸಂಖ್ಯಾತ ಶೋಷಿತವರ್ಗಕ್ಕೆ ನ್ಯಾಯ ಒದಗಿಸುವಲ್ಲಿ ಭಾರತ ಸಂವಿಧಾನ ಮೂಲ ಆಶಯವನ್ನು ಈಡೇರಿಸಿದೆಯೇ? ಎಂಬ ಅಂಶಗಳನ್ನು ಜವಾಬ್ದಾರಿಯಿಂದ ಅಧ್ಯಯನಕ್ಕೆ ಒಳಪಡಿಸುವ ಉದ್ದೇಶವನ್ನು ಹೊಂದಲಾಗಿದೆ. ನ್ಯಾಯಾಂಗದಲ್ಲಿ ನ್ಯಾಯ ಬಯಸಿ ಬರುವ ಜನರ ನೋವು, ದುಗುಡ, ಸಂಕಷ್ಟ ಹಾಗೂ ಸಂಕೀರ್ಣತೆಯನ್ನು ಭಾರತ ಸಂವಿಧಾನ ರಚನೆಯಾದ ನಂತರ ಪ್ರಾಮಾಣಿಕವಾಗಿಯೂ ತುಳಿತಕ್ಕೊಳಗಾದ ಹಾಗೂ ಶೋಷಿತ ಬಹುಸಂಖ್ಯಾತ ಮೂಲ ನಿವಾಸಿಗಳಾದ ದಲಿತರ ಬದುಕಲ್ಲಿ ಬದಲಾವಣೆ ತಂದಿದೆ. ಆದರೆ ಡಾ|| ಬಾಬಾಸಾಹೇಬ್ ಅಂಬೇಡ್ಕರ್ ಅವರ ಕಲ್ಪನೆಯ ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವ ಇವುಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರುವ ಪ್ರಭುತ್ವ ಅಥವಾ ಆಡಳಿತಶಾಹಿ ವ್ಯವಸ್ಥೆಯು ವಿಫಲವಾಗಿದೆ ಎನ್ನಲು ಯಾವುದೇ ಸಂಕೋಚವಿಲ್ಲ. ಸ್ವಾತಂತ್ರ್ಯ ದೊರೆತು ಎಪ್ಪತ್ತು ದಶಕಗಳೇ ಸಂದರೂ ಇನ್ನೂ ಕೂಡ ಬಡತನ ನಿರ್ಮೂಲನೆ, ಮೂಲ ನಿವಾಸಿ, ದಲಿತೋದ್ಧಾರ ಇತ್ಯಾದಿ ಶಬ್ದಗಳು ಚಾಲ್ತಿಯಲ್ಲಿ ಇರುವುದನ್ನು ಗಮನಿಸಿದರೆ, ಅಸಮಾನತೆ ಹಾಗೂ ಅಸ್ಪೃಶ್ಯತೆ ಪಾರಂಪರಿಕವಾಗಿ ಜಾತೀಯತೆಯು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂದು ಹೇಳಲ್ಪಡುವ ಹಾಗೂ ಹೊಗಳಿಸಿಕೊಳ್ಳುವ ಭಾರತದಲ್ಲಿ ಈಗಲೂ ಜೀವಂತವಾಗಿದೆ ಎನ್ನುವುದು ವಿಷಾದದ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಡಾ|| ಬಿ.ಆರ್.ಅಂಬೇಡ್ಕರ್‌ರವರ ಶತಪ್ರಯತ್ನದ ಫಲವಾಗಿ ಲಭಿಸಿರುವ ಭಾರತ ಸಂವಿಧಾನದ ಅಡಿಯಲ್ಲಿ ಡಾ|| ಅಂಬೇಡ್ಕರ್‌ರವರ ಕಲ್ಪನೆಯ ಸಾಮಾಜಿಕ ನ್ಯಾಯ ಹಾಗೂ ಅವರ ಆಶಯಗಳು ಪೂರ್ಣವಾಗಿ ಸ್ವಾತಂತ್ರ್ಯಾನಂತರ ಈಡೇರಿದೆಯೇ? ಎನ್ನುವ ಚೌಕಟ್ಟಿನಲ್ಲಿ ಈ ಅಧ್ಯಯನವನ್ನು ಮಾಡಲಾಗಿದೆ.

ಭಾರತೀಯರಿಗೆ ಪ್ರಾಚೀನ ಕಾಲದಲ್ಲಿ ನ್ಯಾಯದ ಕಲ್ಪನೆ ಇತ್ತು ಎನ್ನುವ ವಿಷಯದಲ್ಲಿ ಯಾವ ಗೊಂದಲವೂ ಇಲ್ಲ. ಆದರೆ ನ್ಯಾಯ ನಿರ್ಮಾತೃರು, ನ್ಯಾಯಪದ್ಧತಿ ರೂಪಿಸಿದ ತಜ್ಞರು ಹಾಗೂ ನ್ಯಾಯನಿರ್ಣಯ ಕೊಡುವ ಅರಸ/ದೊರೆ ಇವರುಗಳಿಗೆ ಅನೇಕ ಪೂರ್ವಾಗ್ರಹಗಳು ಇದ್ದವು ಎನ್ನುವ ಬಗ್ಗೆ, ಗ್ರಂಥಾಧಾರಿತ ನ್ಯಾಯ ನಿರ್ಣಯ ಪದ್ಧತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಇಂತಹ ಅನೇಕ ಅಂಶಗಳು ಕಾಣಸಿಗುತ್ತವೆ. ಆದರೂ ಕಣ್ಮುಚ್ಚಿ ಅದನ್ನೇ ಜಾರಿಗೊಳಿಸಿ ಬಹುಸಂಖ್ಯಾತ ಶೋಷಿತ ವರ್ಗವು ನಂಬುವಂತೆ ಮಾಡಿ ಅವರ ಮೇಲೆ ನಂಬಿಕೆ, ಸಂಪ್ರದಾಯ ಹಾಗೂ ಕಾನೂನಿನ ಪದ್ಧತಿ ಎಂದು ಹೇರಿ ತಮ್ಮ ಪ್ರಭುತ್ವವನ್ನು, ಅರಸೊತ್ತಿಗೆಯನ್ನು ಅಲ್ಲದೇ ಹುದ್ದೆಯನ್ನು ಸ್ವಾರ್ಥಕ್ಕಾಗಿ ಗಟ್ಟಿಗೊಳಿಸಿದೆ. ಜೊತೆಗೆ ಮೇಲ್ವರ್ಗದ ಜನ ಶತಮಾನಗಳಿಂದ ಬಹುಸಂಖ್ಯಾತ ಶೋಷಿತ ವರ್ಗವನ್ನು ದಮನಿಸಿ ಶಾಸ್ತ್ರ, ಪರಂಪರೆ, ಪದ್ಧತಿ, ರೂಢಿ, ಸಂಪ್ರದಾಯ ಹಾಗೂ ಸೂತ್ರ ಇತ್ಯಾದಿ ಹೇಳಿ ನಿರಂತರವಾಗಿ ಬಹುಜಾಣ್ಮೆಯಿಂದ ಬಹುಸಂಖ್ಯಾತ ಶೋಷಿತ ವರ್ಗಗಳ ಮುಗ್ಧತೆಯನ್ನು ಬಡತನವನ್ನು ಹಾಗೂ ದೌರ್ಬಲ್ಯವನ್ನು ತಮಗೆ ಬೇಕಾದ ಹಾಗೆ ಬಳಸಿಕೊಳ್ಳುತ್ತಾ ಬಂದವು. ದಬ್ಬಾಳಿಕೆಯ ಮಾರ್ಗವಾಗಿ ತಾವು ಮಾತ್ರ ಸುಖ, ಸಮೃದ್ಧಿ ಹಾಗೂ ಅಭಿವೃದ್ಧಿ ಹೊಂದುತ್ತಾ ಇಡೀ ಸಮಾಜಕ್ಕೆ ಆದರ್ಶ, ಉಪದೇಶ, ಮಾರ್ಗದರ್ಶನ ಮತ್ತು ಶಾಂತಿಮಂತ್ರವನ್ನು ಜಪಿಸುತ್ತಾ ಬಂದದ್ದನ್ನು ಗಮನಿಸಬಹುದು. ಬಹುಸಂಖ್ಯಾತ ಶೋಷಿತ,

ನಿರ್ಗತಿಕ ಮುಗ್ಧ ಜನರನ್ನು ದಾರಿದ್ರ ಹಾಗೂ ನಿರಂತರ ದಬ್ಬಾಳಿಕೆಯಲ್ಲಿ ತಳ್ಳಿ ಬಡವರ ಹಾಗೂ ಶೂದ್ರರ ನೆತ್ತರು ಮತ್ತು ಬೆವರಲ್ಲಿ ಸೊಗಸಾದ ಬದುಕನ್ನು ಈ ಮೇಲ್ವರ್ಗದವರು ಕಂಡುಕೊಂಡರು.

ಕರ್ನಾಟಕದ ಬುಡಕಟ್ಟುಗಳ ನ್ಯಾಯ ಪದ್ಧತಿ

ಸೋಲಿಗರ ನ್ಯಾಯ ಪದ್ಧತಿ: ಸೋಲಿಗರ ನ್ಯಾಯ ಪಂಚಾಯಿತಿಯನ್ನು ಕಟ್ಟೆ ಮನೆಯ ನ್ಯಾಯ ಎಂದು ಕರೆಯುತ್ತಾರೆ. ಸೋಲಿಗರಲ್ಲಿ ಮುಖ್ಯವಾಗಿ ಪೋಡಿನ ನ್ಯಾಯ ಮತ್ತು ಗಡಿ ನ್ಯಾಯ ಎಂಬ ಪಂಚಾಯಿತಿಗಳಿವೆ. ಸಣ್ಣಪುಟ್ಟ ವ್ಯಾಜ್ಯಗಳು ಪೋಡಿನ ನ್ಯಾಯ ಪಂಚಾಯಿತಿಯಲ್ಲಿ ತೀರ್ಮಾನವಾಗುತ್ತವೆ. ಇಲ್ಲಿ ತೀರ್ಮಾನವಾಗದ ವ್ಯಾಜ್ಯ ಗಡಿ ನ್ಯಾಯಾಲಯದಲ್ಲಿ ತೀರ್ಮಾನವಾಗುತ್ತವೆ. ಸೋಲಿಗರ ನ್ಯಾಯಿ ಶ್ರೇಣಿಕೃತ ವ್ಯವಸ್ಥೆಯನ್ನು ಕಾಣಬಹುದಾಗಿದೆ. "ಸೆಳಕರ ಕುಲದವರು/ಆಲದ ಕುಲದವರು ಯಜಮಾನಿಕೆ ಮಾಡುತ್ತಾರೆ. ಬೆಳ್ಳಿ ಕುಲದವರು ಕೋಲ್ಕಾರ, ತನೇರು ಕುಲದವರು ಪಟೇಗಾರನ ಕರ್ತವ್ಯ ನಿರ್ವಹಿಸುವವರು.೧೫ ಇಂದಿಗೂ ಸೋಲಿಗರು ಅರಣ್ಯವಾಸಿಗಳಾಗಿದ್ದು, ಕರ್ನಾಟಕದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಕಾಡು ಮತ್ತು ಕಾಡಂಚಿನಲ್ಲಿ ನೆಲೆಸಿರುವದನ್ನು ಕಾಣಬಹುದಾಗಿದೆ.

ಜೇನುಕುರುಬರ ನ್ಯಾಯ ಪದ್ಧತಿ : ಇವರ ನ್ಯಾಯ ಪಂಚಾಯಿತಿಯನ್ನು ಹಾಡಿ ನ್ಯಾಯ/ಗಡಿನ್ಯಾಯ ಎಂದು ಕರೆಯುತ್ತಾರೆ. ಈ ವ್ಯಾಪ್ತಿಯಲ್ಲಿ ೩೦ ರಿಂದ ೪೦ ಮನೆಗಳು ಇರುತ್ತವೆ. ಅವರ ಸಾಮಾಜಿಕ ವ್ಯವಸ್ಥೆಗಳಿಂದ ಉದ್ಭವಿಸಬಹುದಾದ ವ್ಯಕ್ತಿ, ಕುಟುಂಬ ಅಥವಾ ತಂಡಗಳ ನಡುವಿನ ಸಂಘರ್ಷ ಹಾಗೂ ಧಾರ್ಮಿಕ ಸಂಘರ್ಷಗಳನ್ನು ಬಗೆಹರಿಸಲು ಹಾಡಿ ನ್ಯಾಯ ಪ್ರಮುಖ ಪಾತ್ರ ವಹಿಸುತ್ತದೆ. ಪರಸ್ಪರಂ ಸಂಬಂಧ ಆಹಾರ ಸಂರಕ್ಷಣೆ, ಅತಿಕ್ರಮಣ, ಮದುವೆಗೆ ಸಂಬಂಧಿಸಿದ ವ್ಯಾಜ್ಯಗಳು ಕುಟುಂಬ, ಕೆರೆ ಸಂಬಂಧಿಸಿದ ವ್ಯಾಜ್ಯಗಳು ಇದರ ವ್ಯಾಪ್ತಿಯಲ್ಲಿ ಬರುತ್ತದೆ. ಜೇನುಕುರುಬ ಬುಡಕಟ್ಟು ಕರ್ನಾಟಕ ಆದಿಮ ಬುಡಕಟ್ಟುಗಳ ಪೈಕಿ ಒಂದಾಗಿದ್ದು, ಇಂದಿಗೂ ಆದಿಮ ಸ್ಥಿತಿಯಲ್ಲಿ ಕಾಡಿನ ಮಧ್ಯದಲ್ಲಿ ವಾಸವಾಗಿದ್ದಾರೆ.

ಕಾಡುಗೊಲ್ಲ ಮತ್ತು ಮ್ಯಾಸ ಬೇಡರ ನ್ಯಾಯ ಪದ್ಧತಿ: ಆಧುನಿಕ ನ್ಯಾಯ ವ್ಯವಸ್ಥೆಯಲ್ಲಿ ಇರುವ ಬಹುಹಂತದ ನ್ಯಾಯ ಪ್ರಕ್ರಿಯೆಯನ್ನು ಹೋಲುವಂತೆ ಕಾಡುಗೊಲ್ಲ ಮತ್ತು ಮ್ಯಾಸಬೇಡ ಸಮುದಾಯಗಳಲ್ಲಿ ಗುಡಿಕಟ್ಟೆ, ಕಟ್ಟೆಮನೆ ಮತ್ತು ಗುರುಸ್ಥಾನ ಎಂಬ ೩ ಹಂತದ ನ್ಯಾಯಿಕ ಪ್ರಕ್ರಿಯೆಯನ್ನು ಕಾಣಬಹುದು. "ರತ್ನಗಿರಿ ಮೀಟಿಗೇರಿ, ಶಂಕರಗಲ್ಲು ಎಂಬ ಮೂರು ಕಟ್ಟೆಮನೆಗಳಿಗೆ, ಕಸ್ತೂರಿ ಮಲ್ಲಪ್ಪ ನಾಯಕ, ಮತ್ತಿ ತಿಮ್ಮಣ್ಣ ನಾಯಕ, ಪದ್ದಮ್ಮಳ ನಾಯಕ ಎಂಬ ಯಜಮಾನರುಗಳು ಇದಂರಂತೆ ಪ್ರತಿಯೊಂದು ನ್ಯಾಯಸ್ಥಾನದ ಹಿರಿಯರನ್ನು ಕಟ್ಟೆ ಯಜಮಾನ ಎಂದು ಕರೆಯುತ್ತಾರೆ. ಪ್ರಸ್ತುತ ಈ ಎಲ್ಲಾ ಕಟ್ಟೆಮನೆಗಳು ಕಾಲಗರ್ಭದಲ್ಲಿ ಅಡಗಿ ಹೋಗಿ ಚಿತ್ರದುರ್ಗ ಜಿಲ್ಲೆಯ ಮ್ಯಾಸ ಬೇಡರಿಗೆ ಮೂರು ಕಟ್ಟೆಮನೆಗಳು ಹನ್ನೆರಡು ಗುಡಿಕಟ್ಟೆಗಳು ಮತ್ತು ಒಂದು ಗುರುಸ್ಥಾನ ಮಾತ್ರ ಉಳಿದುಕೊಂಡಿದೆ. ಕಾಡುಗೊಲ್ಲರಿಗೆ ಮೂರು ಕಟ್ಟೆಮನೆಗಳು ಐದು ಗುಡಿಕಟ್ಟೆಗಳ ಮತ್ತು ಒಂದು ಗುರುಸ್ಥಾನ ಮಾತ್ರ ಉಳಿದುಕೊಂಡಿದೆ. ಗುಡಿಕಟ್ಟೆ, ಕಟ್ಟೇಮನೆ ಮತ್ತು ಗುರುಸ್ಥಾನದಂ ಗುರುಗಳು ಯಜಮಾನ, ದೊರೆ, ಪೂಜಾರಿಗೌಡ ಮೊದಲಾದ ಹುದ್ದೆಗಳು ಅನುವಂಶಿಕವಾಗಿ ಬರುತ್ತಿದ್ದವು."೨೦ ಪ್ರಸ್ತುತ ಆಧುನಿಕತೆಯ ಕಾರಣದಿಂದ ಈ ಕಟ್ಟೆಮನೆ, ಗುರುಕಟ್ಟೆ ಮತ್ತು ಗುರುಸ್ಥಾನಗಳ ಕಾರ್ಯಸ್ವರೂಪಗಳ ಮೂಲ ಸ್ವರೂಪದಲ್ಲಿ ಬದಲಾವಣೆಗಳನ್ನು ಕಾಣಬಹುದಾಗಿದೆ.

ಜಗ್ಗಲಿ ಸಮುದಾಯದ ಒಳಾಡಳಿತ ವ್ಯವಸ್ಥೆ ಮತ್ತು ನ್ಯಾಯ ಪದ್ಧತಿ

೧೯೮೩ರಿಂದ ಜಗ್ಗಲಿಗಳಿಗೆ ಊರಿನ ಛೇರನ್ ನೀಡಿದ ಸ್ಥಳ ಚೀಟಿಗಳಿವೆ. ೧೯೮೩ ರಿಂದ ೨೦೦೨ರವರೆಗೆ ನೀಡಲಾಗಿದೆ. ತೀರಾ ಅನಕ್ಷರಸ್ಥರಾದ ಜಗ್ಗಲಿಗಳಿಗೆ ದೇಶದಲ್ಲಿನ ವರ್ತಮಾನಗಳು ತಿಳಿಯುವುದಿಲ್ಲ. ಸ್ವತಂತ್ರ್ಯ, ಮೂಲಭೂತ ಹಕ್ಕುಗಳು, ಕರ್ತವ್ಯಗಳು, ಕಾನೂನು ವ್ಯವಸ್ಥೆ, ಕಾನೂನು ಭದ್ರತೆಗಳು, ಅಲೆಮಾರಿಗಳಿಗೆ ಸರ್ಕಾರ ನೀಡಲಾದ ಸೌಲಭ್ಯಗಳ ಬಗ್ಗೆ ಮಾಹಿತಿ ಕಡಿಮೆಯಿರುತ್ತದೆ. ಸ್ವತಂತ್ರ್ಯ ಬಂದ ಮೇಲೂ ಜಗ್ಗಲಿಗಳಿಗೆ ಗುರುತಿನ ಚೀಟಿ ನೀಡಿದ ಮತ್ತು ಅದನ್ನು ಪರೀಕ್ಷಿಸಿಸುವ ಪೋಲೀಸ್ ವ್ಯವಸ್ಥೆಗಾದರೂ ಕಾನೂನಿನಲ್ಲಿ ನಮೂದಿಸಲಾದ ನಿಯಮಗಳ ಬಗ್ಗೆ ಗೊತ್ತಿರದಿದ್ದರೆ ಹೇಗೆ? ಭಾರತದಲ್ಲಿಯೂ ಜಗ್ಗಲಿಗಳು ಅಪರಾಧಿಗಳಂತೆ ಸ್ಥಳಚೀಟಿಯ ಗುರುತನ್ನು ಹಿಡಿದು ಜೋಪಾನ ಮಾಡಿಕೊಂದು ಅಪರಾಧಿಗಳಂತೆಯೇ ಉಳಿದಿದ್ದರು.

ಮಾನವನು ಈ ಭೂಮಿಯಲ್ಲಿ ಹುಟ್ಟಿದಂದಿನಿಂದ ಒಂದಿಲ್ಲೊಂದು ರೂಪದಲ್ಲಿ ತನ್ನದೆ ಆದ ನ್ಯಾಯ ವ್ಯೆವಸ್ಥೆಯನ್ನು ರೂಪಿಸಿಕೊಂಡಿದ್ದಾನೆ. ಆಸ್ತಿ ಎಂಬುದು ಅಸ್ತಿತ್ವಕ್ಕೆ ಬಂದ ಮೇಲೆ ಅವನ ನ್ಯಾಯ ವ್ಯವಹಾರಗಳು ಹೆಚ್ಚುತ್ತಾ ಹೋಗಿ ನ್ಯಾಯಶಾಸ್ತ್ರದ ಪದ್ಧತಿಗಳ ಅವಶ್ಯಕತೆ ಹೆಚ್ಚಿರಬಹುದು. ಆದರೆ ಬುಡಕಟ್ಟುಗಳ ನ್ಯಾಯದ ಕಲ್ಪನೆ ಬಹಳ ವಿಶಿಷ್ಟವಾದುದು. ಸಾಮಾಜಿಕ, ಸಾಂಸ್ಕೃತಿಕ ಕಾರಣಗಳಿಂದಾಗಿ ಒಂದು ಬುಡಕಟ್ಟಿನಿಂದ ಇನ್ನೊಂದು ಬುಡಕಟ್ಟಿಗೆ ಹಾಗೂ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಇದರ ಸ್ವರೂಪದಲ್ಲಿ ಭಿನ್ನತೆಯಿರುವುದನು ಕಾಣಬಹುದು. ಬುಡಕಟ್ಟು ಸಮುದಾಯದ ನಂಬಿಕೆ, ಆಚರಣೆ, ಆದರ್ಶ, ಮೌಲ್ಯಗಳು ನ್ಯಾಯಪದ್ಧತಿಯನ್ನು ರೂಪಿಸುತ್ತವೆ. ಈ ನ್ಯಾಯಪದ್ಧತಿಯ ಕ್ರಮ ಬುಡಕಟ್ಟುಗಳಲ್ಲಿ ಅತ್ಯಂತ ನಿಷ್ಠೆಯಿಂದ ಪರಿಪಾಲಿಸಲ್ಪಡುತ್ತದೆ. ಸತ್ಯಾನ್ವೇಷಣೆಯನ್ನು ಸತ್ವಪರೀಕ್ಷೆ, ಪ್ರಮಾಣ ಮತ್ತು ಇತರ ವಿಧಾನಗಳಿಂದ ಮಾಡಲಾಗುತ್ತದೆ. ತಪ್ಪು ಮಾಡಿದವನ ಮೇಲೆ ದೇವರಿಗೆ ಕೋಪವೂ, ಮುಗ್ಧರ ಮೇಲೆ ದಂಡಿನ ಮಾರಮ್ಮ ದೇವರ ಅನುಗ್ರಹವೂ ಉಂಟಾಗುವಂತೆ ಪ್ರಾರ್ಥಿಸುವ ಈ ವಿಧಾನ ಇಂದಿಗೂ ಭಾರತ ಮತ್ತು ಇತರ ದೇಶಗಳ ನ್ಯಾಯಾಲಯಗಳಲ್ಲಿ ಪವಿತ್ರ ಪ್ರಮಾಣ ವಚನವನ್ನು ಹೇಳಿಸುವುದರಿಂದ ಸಾಕ್ಷಿಯ ಸತ್ಯಾಸತ್ಯತೆಯನ್ನು ಪರೀಕ್ಷಿಸುವುದುಂಟು. ಆದರೆ ಇದರ ಸತತ ಉಪಯೋಗದಿಂದ ಪವಿತ್ರತೆ ದುರುಪಯೋಗವಾಗಿ ಅದರ ಪರಿಣಾಮ ಕಡಿಮೆಯಾಯಿತು. ಸಾಕ್ಷಿಗಳಿಂದ ಸತ್ಯವನ್ನು ಹೊರಗೆಳೆಯಲು ಪವಿತ್ರ ಗ್ರಂಥಗಳನ್ನು, ಪವಿತ್ರ ನದಿ ಜಲವನ್ನು ಸಾಮಾನ್ಯವಾಗಿ ಬಳಸಲಾಗುತ್ತಿದೆ. ಹೀಗೆ ಬುಡಕಟ್ಟುಗಳ ನ್ಯಾಯಿಕ ವ್ಯವಸ್ಥೆ ಆಧುನಿಕತೆಗೆ ಮುಖಾಮುಖಿಯಾಗುವುದನ್ನು ಕಾಣಬಹುದು. ಜಗ್ಗಲಿಗಳಿಗೆ ತಮ್ಮ ನ್ಯಾಯ ಪದ್ಧತಿ ಯಾವುದೇ ನ್ಯಾಯಾಲಯಕ್ಕಿಂತ ಹೆಚ್ಚಿನದಾಗಿರುತ್ತದೆ. ಪ್ರತಿಯೊಂದು ಬುಡಕಟ್ಟು ಸಮುದಾಯವು ತನ್ನ ಸಮುದಾಯದ ಅಭಿವೃದ್ಧಿಗಾಗಿ ತನ್ನದೇ ಆದ ನ್ಯಾಯ ತೀರ್ಮಾನದ ವ್ಯವಸ್ಥೆಯನ್ನು ಹೊಂದಿರುತ್ತದೆ. ಆದರೆ ಜಗ್ಗಲಿಯರಂ ನ್ಯಾಯ ಪದ್ಧತಿಯು ವಿಶಿಷ್ಟತೆಯಿಂದ ಕೂಡಿದೆ. ಇವರ ನ್ಯಾಯಪದ್ಧತಿ ಇತರೆ ಬುಡಕಟ್ಟು ಜನರಂತೆ ಕಂಡುಬಂದರೂ, ಕೆಲವು ರೂಢಿ ಸಂಪ್ರದಾಯಗಳು ಉಳಿದ ಸಮುದಾಯಗಳಿಗಿಂತ ಭಿನ್ನವಾಗಿವೆ. ಜಗ್ಗಲಿಯರ ತಮ್ಮ ನಡುವಣ ಯಾವುದೇ ರೀತಿಯ ಜಗಳ, ವ್ಯಾಜ್ಯ, ನ್ಯಾಯಗಳನ್ನು ತಮ್ಮಲ್ಲಿಯೇ ಬಗೆಹರಿಸಿಕೊಳ್ಳುತ್ತಾರೆ. ಇಂಥ ನ್ಯಾಯ ವ್ಯವಸ್ಥೆಯನ್ನು ಇವರು ಕಟ್ಟೆಮನೆಗಳೆಂದು ಕರೆದರು.

ಜನಸಾಮಾನ್ಯರನ್ನು ಮುಖ್ಯವಾಗಿ ಲಕ್ಷೆಯಲ್ಲಿಟ್ಟುಕೊಂಡು ಈ ಕಟ್ಟೆಮನೆಯಲ್ಲಿ ನ್ಯಾಯ ತೀರ್ಮಾನ ಮಾಡಲಾಗುತ್ತೆ. ಜಗ್ಗಲಿಯರ ಈ ಕಟ್ಟೆಮನೆಗಳಿಗೆ ಪವಿತ್ರವಾದ ಸ್ಥಾನವನ್ನು ನೀಡಿ ಗೌರವದಿಂದ ನಡೆದುಕೊಳ್ಳುತ್ತಿದ್ದಾರೆ. ಇಂತಹ ಕಟ್ಟೆಮನೆಗಳು ಚಿತ್ರದುರ್ಗ, ಬಳ್ಳಾರಿ, ತುಮಕೂರು ಜಿಲ್ಲೆಗಳಲ್ಲಿ ಹೇರಳವಾಗಿ ಕಂಡುಬರುತ್ತವೆ. ಮ್ಯಾಸ, ಕಾಡುಗೊಲ್ಲ, ಆದಿಕರ್ನಾಟಕ ಜನಾಂಗ

ವ್ಯಾಪಿಸಿರುವ ಭೂಪ್ರದೇಶವನ್ನು ಪ್ರಾದೇಶಿಕವಾಗಿ ಮೂರು ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ಒಂದೊಂದು ವಿಭಾಗ ಸ್ವತಂತ್ರ ನ್ಯಾಯಸ್ಥಾನ ಒಳಗೊಂಡಿದೆ. ಈ ನ್ಯಾಯಸ್ಥಾನಗಳನ್ನು ನಡೆಸುವಾತನಿಗೆ ಕಟ್ಟೆಮನೆ ಯಜಮಾನ ಎಂದು ಕರೆಯುತ್ತಾರೆ ಹೀಗೆ ಕಟ್ಟೆಮನೆಯ ಯಜಮಾನನ ತೀರ್ಮಾನವೇ ಅಂತಿಮವಾಗುತ್ತಿತ್ತು . ನ್ಯಾಯವು ಸಮಹಿತವಾಗಿ ನಡೆದು ವ್ಯಾಜ್ಯಗಳಿಗೆ ತೀರ್ಪು ನೀಡಲಾಗುತ್ತಿತ್ತು. ಕಟ್ಟೆಮನೆಯಲ್ಲಿ ೧.ಆಗಸ್ತರು ೨.ಡೊಕ್ಕೊಳ್ಳ ೩.ತುರಪಾಟೋಳ್ ೪.ನ್ಯಾರಕಂಟಿ ೫.ಕಡಮಂಚೋವರು ೬.ಪ್ರಸಾದ್ಮೊಳ್ಳ ೭.ಪರ್ಚಮೋಳ್ ಈ ಏಳು ಗೊತ್ರದವರು ಜನ ಹಿರಿಯರು, ಇವರಿಗೆ ನೆರವಾಗಲು ೭ ಜನ ಗೋತ್ರದವರು ಇರುತ್ತಾರೆ. ಈ ವ್ಯಾಜ್ಯಗಳು ಗೋತ್ರದವರು ಗಮನಕ್ಕೆ ಬಂದು ಕರೆದುಕೊಂಡು ನಂತರ ಕಟ್ಟೆಮನೆಗೆ ಹೋಗುತ್ತಿದ್ದವು.

ಕಟ್ಟೆಮನೆ ಜಗ್ಗಲಿಯರ ಈ ನ್ಯಾಯಪದ್ಧತಿಯಲ್ಲಿ ಕಟ್ಟೆಮನೆಯ ದೊರೆ ಅಥವಾ ಯಜಮಾನನ ತೀರ್ಮಾನವೇ ಅಂತಿಮವಾಗುತ್ತಿತ್ತು. ನ್ಯಾಯ ತೀರ್ಮಾನಗಳು ಕುಲದೇವತೆಯ ಮುಂದೆ ಹಿರಿಯರ ಸಮ್ಮುಖದಲ್ಲಿ ನಡೆಯುತ್ತಿದ್ದವು. ತಪ್ಪಿತಸ್ತನು/ಳು ಕಟ್ಟೆಮನೆಯ ಪಂಚಾಯತಿಗೆ ಮತ್ತು ಹಿರಿಯರಿಗೆ, ದೇವರಿಗೆ ತಲೆ ಬಾಗಲೇಬೇಕಾಗಿತ್ತು. ಹೀಗಾಗಿ ಪ್ರತಿಯೊಂದು ಹಂತದಲ್ಲಿಯೂ ತಮ್ಮದೇ ಆದ ನೀತಿ ನಿಯಮಗಳ ಮೂಲಕ ನ್ಯಾಯಪದ್ಧತಿಯನ್ನು ಸೃಷ್ಟಿಸಿಕೊಂಡು ಪ್ರಾಮಾಣಿಕತೆಯಿಂದ ಬದುಕುತ್ತಿದ್ದ ಬುಡಕಟ್ಟು, ಜಗ್ಗಲಿ ಸಮುದಾಯವು ಆಗಿದೆ.

ಕಟ್ಟೆಮನೆಗಳ ಅರ್ಥ ಮತ್ತು ರಚನೆ

ಜಗ್ಗಲಿ ಸಮುದಾಯ ತನ್ನದೇ ಆದ ಸಂಸ್ಕೃತಿಯನ್ನೊಳಗೊಂಡಿದೆ. ಬುಡಕಟ್ಟುಗಳ ಸಂಸ್ಕೃತಿಯಲ್ಲಿ ವಿಶಿಷ್ಟವಾಗಿ ಕಂಡುಬರುವ ಈ ಸಮುದಾಯದ ಕಲೆ, ಆಚರಣೆ, ಸಂಪ್ರದಾಯ, ನ್ಯಾಯಿಕ ವ್ಯವಸ್ಥೆ, ಬದುಕಿನ ರೀತಿ-ನೀತಿ ವಿಭಿನ್ನವಾಗಿವೆ. ಈ ಸಮುದಾಯ ಮೂಲ ವೃತ್ತಿಯನ್ನು ಬಿಟ್ಟು ಪರ್ಯಾಯ ವೃತ್ತಿಯನ್ನು ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡು ಬಂದುದಾಗಿದೆ. ಶ್ರೀಶೈಲ ಮೂಲದಿಂದ ಬಂದಂತಹ ಈ ಜನಾಂಗವು ಅಲೆಮಾರಿಯಾಗಿ ಜೀವನ ಸಾಗಿಸುತ್ತಿತ್ತು. ಬದಲಾದ ಸಂದರ್ಭದಲ್ಲಿ ಒಂದು ಕಡೆ ನೆಲೆಸಿ ವಾಸಿಸತೊಡಗಿದರು. ಆಗ ಅವರ ಜೀವನ ಕ್ರಮಕ್ಕೆ ಒಂದು ನ್ಯಾಯದ ವ್ಯವಸ್ಥೆ ಅವಶ್ಯವಾಗಿ ಬೇಕಾಗಿತ್ತು. ಅದಕ್ಕಾಗಿ ಅವರು ಕಟ್ಟೆಮನೆಗಳನ್ನು(ನ್ಯಾಯವ್ಯವಸ್ಥೆ) ಸ್ಥಾಪಿಸಿಕೊಂಡರು. ಕಟ್ಟೆಮನೆಗೆ (ಎಜೆಗಾರು)ಎಂದು, ಕಟ್ಟೆಮನೆ ಎಂದರೆ ಜಾತಿಯ ಶ್ರೇಣಿ, ಸಂಘ, ಸಂಸ್ಥೆ ಎಂದು ತಿಳಿಸಲಾಗಿದೆ. ಇಂದು ಕಟ್ಟೆಮನೆಯನ್ನು ಪಂಚಾಯಿತಿ ಕಟ್ಟೆ ಎಂದು ಕರೆಯುವುದೇ ಹೆಚ್ಚು. ಹೀಗೆಂದರೆ: ಚಾವಡಿ, ಕಟ್ಟೆಮನೆ, ಗುರುಮನೆ- ಅರಮನೆಗಳಿಗೆ ವಿಧೇಯನೋ ಎಂದು ಕೇಳುವರು. ಇನ್ನೊಂದು ಅರ್ಥದಲ್ಲಿ ಕಟ್ಟೆಮನೆ ಗ್ರಾಮಾಕಾರಿಯ ಮನೆ, ವಾರ ಮುಖಂಡರ ಮನೆ ಎಂದಾಗುತ್ತದೆ. ಬುಡಕಟ್ಟು ಸಮುದಾಯಗಳಲ್ಲಿ ಕಟ್ಟೆಮನೆ ಯಜಮಾನನು ಊರಿನ ಜಾತಿಯ ಮುಖಂಡನೂ ಆಗಿರುತ್ತಿದ್ದ. ಕಟ್ಟೆಮನೆ ಎಂದರೆ ಯಾವುದೇ ಒಂದು ಬುಡಕಟ್ಟು ಸಮುದಾಯದಲ್ಲಿ ನಡೆಯುವ ಆಂತರಿಕ ಕಲಹ, ಸಂಘರ್ಷಗಳು ಹಾಗೂ ಅನೈತಿಕ ಮತ್ತು ಕಾನೂನು ಬಾಹಿರ ಚಟುವಟಿಕೆಗಳನ್ನು ಕುರಿತಂತೆ ಅವುಗಳಿಗೆ ಸಂಬಂಸಿದ ತಕರಾರುಗಳನ್ನು ತೀರ್ಮಾನ ಮಾಡಿ ನ್ಯಾಯ ಒದಗಿಸುವ ಒಂದು ನಿರ್ದಿಷ್ಟವಾದ ನ್ಯಾಯ ವ್ಯವಸ್ಥೆ ಹೊಂದಿರುವ ಆಸ್ಥಾನಕ್ಕೆ ಕಟ್ಟೆಮನೆ ಎಂದು ಕರೆಯಬಹುದು. ಬುಡಕಟ್ಟು ವ್ಯವಸ್ಥೆಯ ಈ ಕಟ್ಟೆಮನೆಗೆ ಅಕಾರ ವರ್ಗವಿದ್ದು, ಮೊದಲು ದೊರೆ ನಂತರದ ಸ್ಥಾನದಲ್ಲಿ ಗುಡಿಕಟ್ಟೆಯ ಪೂಜಾರಿ ಮತ್ತು ಕುಲದ ಹಿರಿಯರು ಹಾಗೂ ಕುಲಸಾವಿರದವರು ಸೇರಿದ ವ್ಯವಸ್ಥೆ ಇರುತ್ತದೆ. ಇದನ್ನು ಜಗ್ಗಲಿ ಸಮುದಾಯದ ಕಟ್ಟೆಮನೆ ಎಂಬುದಾಗಿ ಕರೆಯುತ್ತಾರೆ.

ಜಗ್ಗಲಿಯವರ ಕಟ್ಟೆ ಮನೆಗಳ ವೈಶಿಷ್ಟ್ಯ ಮತ್ತು ಶಿಕ್ಷೆ ಮತ್ತು ನಿರ್ಬಂಧಗಳ ವಿವರ

ಸಂರಕ್ಷಣೆ, ಭದ್ರತೆ, ಸುಗಮ ಕರ್ತವ್ಯ ನಿರ್ವಹಣೆ ಮುಂತಾದ ಉದ್ದೇಶಗಳಿಗಾಗಿ ಸಮಾಜದಲ್ಲಿ ಹಲವು ಶ್ರೇಣಿಗಳು ನಿರ್ಮಾಣಗೊಂಡಿರುತ್ತವೆ. ಇಂಥ ಶ್ರೇಣಿಗಳು ಜಗ್ಗಲಿ ಸಮುದಾಯದಲ್ಲಿಯೂ ಇವೆ. ಜಗ್ಗಲಿಯರ ಕಟ್ಟೆಮನೆಯ ಕಾರ್ಯ ಸ್ವರೂಪವು ವಿಭಿನ್ನ ರೀತಿಯ ಆಚರಣೆಯನ್ನು ಹೊಂದಿರುವುದನ್ನು ಗಮನಿಸಬಹುದು. ಊರ ಹೊರಗಡೆ ವಾಸಿಸುತ್ತಿದ್ದ ಜಗ್ಗಲಿಗರಿಗೆ ಹೆಣ್ಣು ಇಂಥ ಸಂಗತಿಗಳಿಗೂ ಭಯ-ಭೀತಿ ವೈಮನಸ್ಸು ಬಂದಾಗ ಯಜಮಾನರ ಸಲಹೆ ಅಗತ್ಯವಾಗಿತ್ತು. ಈ ಸಮುದಾಯದಲ್ಲಿ ಚಪ್ಪಲಿ(ಪಾದರಕ್ಷೆ) ಎಂದು ಈ ಸಮುದಾಯದ ಯಾವ ಒಬ್ಬ ವ್ಯಕ್ತಿ ಬಾಯಿಂದ ಬಂದರೆ ಬಡಿತ್ತೀನಿ ಎಂದರೇ ಆ ವ್ಯಕ್ತಿಗೆ ಸಮುದಾಯದ ಹಿರಿಯರಿಗೆ ಅಥವಾ ಯಜಮಾನರಿಗೆ ಕಿವಿಗೆ ಕೇಳಿದರೆ ಮತ್ತು ಯಾರದರೂ ಬಂದು ಹೇಳಿದರೆ ಆ ವ್ಯಕ್ತಿಯನ್ನು ಕಟ್ಟೆಮನೆಗೆ ಕರೆಸಿ ನೂರು ರೂಪಾಯಿಗಳು ದಂಡ ವಿಧಿಸಲಾಗುತ್ತದೆ. ಕೆಲವೊಮ್ಮೆ ಬುದ್ಧಿವಾದ ಹೇಳಿ ಕಳಿಸುವರು. ಇದರ ನಂತರದಲ್ಲಿ ಸಮುದಾಯದಲ್ಲಿ ಯಾರದರೂ ಮಾತಾನಾಡುವಾಗ ಜಗಳದ ಸಂದರ್ಭದಲ್ಲಿ ಸಮುದಾಯದ ವ್ಯಕ್ತಿ ಚಪ್ಪಲಿ ಕೈಯಲ್ಲಿ ಹಿಡಿದರೆ ಅಂತಹ ವ್ಯಕ್ತಿಗೆ ಕುಲದ ಯಜಮಾನರು ಕಟ್ಟೆಮನೆಗೆ ಕರೆಸಿ ನ್ಯಾಯ ಪಂಚಾಯಿತಿ ಮಾಡಿಸಿ ಅವನಿಗೆ ಎರಡುನೂರ ಐವತ್ತು ರೂಪಾಯಿಗಳು ದಂಡ ವಿಧಿಸುತ್ತಾರೆ ಜೊತೆಗೆ ಮತ್ತೆ ಈ ತರಹದ ಅಸಭ್ಯ ವರ್ತನೆಗಳು ಮರಕಳಿಸಿದರೆ ದಂಡವನ್ನು ವಿಧಿಸುವುದಿಲ್ಲ ಬದಲಾಗಿ ಸಮುದಾಯದಿಂದ ಅಥವಾ ಕುಲದಿಂದ ಹೊರಗಡೆ ಇಡಬೇಕಾಗುತ್ತದೆ ಎಂದು ಕಟ್ಟೆಚ್ಚರದ ಮಾತುಗಳನ್ನು ಹೇಳಿ ಕಳಿಸುತ್ತಾರೆ.

ಕೆಲವೊಂದು ಸಂದರ್ಭಗಳಲ್ಲಿ ಈ ಸಮುದಾಯದ ವ್ಯಕ್ತಿ ಚಪ್ಪಲಿಯನ್ನು ಒಬ್ಬ ವ್ಯಕ್ತಿಯ ಮೇಲೆ ಎಸೆದರೆ. ಚಪ್ಪಲಿ ಎಸೆದ ವ್ಯಕ್ತಿಯನ್ನು ಕಟ್ಟೆಮನೆಗೆ ಕರೆಸಿ ಮೂನ್ನೂರು ರುಪಾಯಿಗಳು ದಂಡವನ್ನು ವಿಧಿಸುತ್ತಾರೆ. ಈ ದಂಡವನ್ನು ಕಟ್ಟೆಮನೆಗೆ ನೀಡಬೇಕಾಗುತ್ತದೆ ನಂತರ ಕಟ್ಟೆಮನೆಯ ಯಜಮಾನರು ಸೇರಿ ಚಪ್ಪಲಿ ಎಸೆದ ವ್ಯಕ್ತಿಗೆ ಸಮುದಾಯದ ಕಟ್ಟು ಪಾಡುಗಳು ಮತ್ತು ನಿಯಮಗಳನ್ನು ಆ ವ್ಯಕ್ತಿಗೆ ಮನವರಿಕೆ ಮಾಡಿಸಿ ಎಚ್ಚಾರವಾಗಿರು ಎಂದು ಬುದ್ಧಿ ಹೇಳಿ ಕಳಿಸುತ್ತಾರೆ. ಒಂದು ವೇಳೆ ಜಗ್ಗಲಿ ಸಮುದಾಯದಲ್ಲಿ ವ್ಯಕ್ತಿಗೆ ಚಪ್ಪಲಿ ತಗುಲಿದರೆ ಅಂತಹ ವ್ಯಕ್ತಿಗಳನ್ನು ಹೊಡೆದ, ಹೊಡಸಿಕೊಂಡವರನ್ನು ಕಟ್ಟೆಮನೆಗೆ ಕರೆಯಿಸಿ ಕುಲಪಂಚಾಯಿತಿಯಲ್ಲ ಮಾಡಿ ಚಪ್ಪಲಿಯಿಂದ ಹೊಡೆದ ವ್ಯಕ್ತಿಗೆ ಐದುನೂರು ರೂಪಾಯಿಗಳು ಹೊಡಸಿಕೊಂಡವನಿಗೆ ಐದುನೂರು ರೂಪಾಯಿ ದಂಡವನ್ನು ವಿಧಿಸಲಾಗುತ್ತದೆ. ಜೊತೆಗೆ ಚಪ್ಪಲಿಯಿಂದ ಹೊಡೆದ ವ್ಯಕ್ತಿಯಿಂದ ಕಟ್ಟೆಮನೆಯ ಯಜಮನರಿಗೆ ಮತ್ತು ಅಲ್ಲಿನ ಕುಲದ ಸರ್ವರಿಗೂ ಕೋಳಿ ಮಾಂಸ ಜೊತೆಗೆ ಸಾರಾಯಿ ಹೀಗೆ ಅವರು ಊರಿನ ಹೊರಗೆ ತೆಗೆದುಕೊಂಡು ಹೋಗಿ ಅಡುಗೆ ಮಾಡಿಕೊಂಡು ಊಟ ಮಾಡುತ್ತರೆ. ಮೆಟ್ಟಿನಿಂದ ಹೊಡೆಸಿಕೊಂಡವನು ಕುಲಕೆಟ್ಟವನು ಎಂದು ಹೇಳುತ್ತಾರೆ. ತಿಪ್ಪೇರುದ್ರ ಸ್ವಾಮಿಗೆ ಹೋಗಿ ತೀರ್ಥ ಹಾಕಿಸಿಕೊಂಡು ಅವರನ್ನು ಕುಲಕ್ಕೆ ಸೇರಿಸಿಕೊಳ್ಳುತ್ತಾರೆ.

ಈ ಸಮುದಾಯದಲ್ಲಿ ಯಾವುದಾರು ದೊಡ್ಡ ಮಟ್ಟದ ಘಟನೆಗಳು ನಡೆದರೆ ಅಂದರೆ ಈ ಕುಲದ ಒಂದು ಹೆಣ್ಣಿನ ಮೇಲೆ ಯಾರಾದರು ಅತ್ಯಚಾರವಾಗಿದ್ದರೆ ಮತ್ತು ಈ ಸಮುದಾಯದಲ್ಲಿ ಹೆಣ್ಣು ಬೇರೆ ಜಾತಿಯವನನ್ನು ಮದುವೆ ಆದರೆ ಸಂಬಂಧಪಟ್ಟವರನ್ನು ಕರೆದು ನ್ಯಾಯ ವಿಚಾರಗಳನ್ನು ತಿಳಿಸಿ ಹೇಳಿ ದಂಡ ವಿಧಿಸಿ ಮತ್ತು ಕುರಿಯನ್ನು ತರಸಿ ಕಡಿಯುತ್ತಾರೆ. ಇವರ ಜನಸಂಖ್ಯೆ ಕಡಿಮೆ ಇರುವುದರಿಂದ ಈ ತರಹದ ಘಟನೆಗಳ ಬಗ್ಗೆ ಕಟ್ಟುನಿಟ್ಟಾದ ಕ್ರಮಗಳನ್ನು ತಗೆದುಕೊಳ್ಳುತ್ತರೆ. ಹೆಣ್ಣಿನ ಮನೆಗೊಂದು ಒಂದು ಪಾಲು, ಉಳಿದಿದ್ದು ಕುಲದವರು ಕಟ್ಟೆಮನೆಯ ಮುಂಭಾಗದಲ್ಲಿ ಊಟ ಮಾಡುತ್ತಾರೆ. ಜಗ್ಗಲಿ ಸಮುದಾಯದ ಇನ್ನೊಂದು ನ್ಯಾಯ ವ್ಯವಸ್ಥೆಯಲ್ಲಿ ಒಂದಾದಿದ್ದು ಎಂದರೆ ಸಮುದಾಯದ ಜನರು ಅಧಿಕವಾಗಿ ಹೆಂಡ, ಸಾರಾಯಿ ಸೇವನೆ ಮಾಡುತ್ತಾರೆ. ಇಂತಹ

ಸಂದರ್ಭದಲ್ಲಿ ನಶೆಯಲ್ಲಿ ಇರುವ ಜಗ್ಗಲಿ ವ್ಯಕ್ತಿಗಳು ಧನದ ಮಾಂಸವನ್ನು ಊಟ ಮಾಡಿದರೆ ಮತ್ತು ಮ್ಯಾಸಬೇಡ, ಮುಸ್ಲಿಂ, ವಡ್ರು ಈ ಸಮುದಾಯದ ಮನೆಗಳಲ್ಲಿ ದೊಡ್ಡ ಮಾಂಸವನ್ನು ಊಟ ಮಡಿದರೆ ೧೫೦ ರೂಪಾಯಿ ದಂಡವನ್ನು ವಿಧಿಸಲಾಗುತ್ತದೆ. ಊಟ ಮಾಡಿದರೆ ಸಮುದಾಯದಿಂದಲೇ ಬಹಿಷ್ಕರಿಸುತ್ತಿದ್ದರು. ಇದರ ನಂತರದಲ್ಲಿ ಕುಲದ ಯಜಮಾನರಿಗೆ ತಿಳಿದು ಅಥವಾ ಯಾರಾದರೂ ಬಂದು ಹೇಳಿದರು ಕೂಡ ದಂಡ ವಿಧಿ ಬೂದಿ(ವಿಭೂತಿ)ಯಿಂದ ಹಣೆಗೆ ಅಚ್ಚಿ ದಂಡವನ್ನು ತಗೆದುಕೊಳ್ಳುತ್ತಾರೆ. ಜೊತೆಗೆ ಪುರುಷ ಧನದ ಮಾಂಸವನ್ನು ಊಟ ಮಾಡಿದ ವ್ಯಕ್ತಿಗೆ ತಲೆ ಬೋಳಿಸಿ ಏಳು ದೇವಸ್ಥಾನಗಳಿಗೆ ಹೋಗಿ ಪೂಜೆ ಮಾಡಿಸಿಕೊಂಡು ಬಂದ ನಂತರದಲ್ಲಿ ಬೇವಿನ ಕಡ್ಡಿ, ಬಂಗಾರದ ಕಡ್ಡಿ, ಅರಶಿಣ ಕೊಂಬು ಇವುಗಳಿಂದ ನಾಲಿಗೆಗೆ ಸುಡುತ್ತಾರೆ. ಇದು ಆದ ಬಳಿಕ ಕುಲದ ಒಳಗಡೆ ಪ್ರವೇಶ ಮಾಡಲು ಅನುಮತಿ ಕೋಡುತ್ತಾರೆ. ಈ ಸಮುದಾಯದಲ್ಲಿ ದೊಡ್ಡ ಮಾಂಸ ಊಟ ಮಾಡುವುದು ದೊಡ್ಡ ಅಪರಾಧವೆಂದು ಮತ್ತು ಗೋವು ಹಿಂದುಗಳ ಪವಿತ್ರ ದೈವ ಮತ್ತು ಮುಕ್ಕೋಟಿ ದೇವರುಗಳು ಇವೆ ಎಂಬುವ ಭಾವನೆ ನಮ್ಮಲ್ಲಿ ಇದೆ ಎಂದು ಹೇಳುತ್ತಾರೆ.

ಅನೈತಿಕ ಸಂಬಂಧ

ಮದುವೆಯನ್ನು ಮಾನ್ಯಮಾಡಿ ಈ ಸಮುದಾಯವನ್ನು ಗೌರವ ನೀಡುತ್ತಾರೆ. ಈ ವೈವಾಹಿಕ ಸಂಬಂಧದ ಹೊರತಾಗಿ ಅನೈತಿಕ, ಆಕ್ರಮವಾಗಿ ಲೈಂಗಿಕ ಸಂಬಂಧವನ್ನು ಜಗ್ಗಲಿಗರು ವಿರೋಧಿಸುತ್ತಾರೆ. ಅದು ಅಪರಾಧವೆಂದು ಶಿಕ್ಷೆಯನ್ನು ನೀಡಿ ಊರಿನಿಂದ, ಕುಲದಿಂದ ಬಹಿಷ್ಕರಿಸುತ್ತಾರೆ. ತಮ್ಮ ಸಮುದಾಯದಲ್ಲಿ ಅಥವಾ ಅನ್ಯ ಸಮುದಾಯದೊಂದಿಗೆ ಅನೈತಿಕ ಸಂಬಂಧ ಹೊಂದುವ ಯಾವುದೇ ಗಂಡು, ಹೆಣ್ಣು ಶಿಕ್ಷಾರ್ಹರು. ತಮ್ಮ ಸಮುದಾಯದಲ್ಲಿಯೇ ಅನೈತಿಕ ಸಂಬಂಧ ಹೊಂದಿದ್ದರೆ, ಅವರನ್ನು ಕುಲಕ್ಕೆ ಸೇರಿಸಿಕೊಳ್ಳುವಾಗ ಅವರಿಗೆ ನೀರೆರೆದು, ಐದು ಕುಲದೈವಗಳಿಗೆ ಪೂಜೆಯನ್ನು ಮಾಡುತ್ತಾರೆ. ಇತರ ಯಾವುದೇ ಸಮುದಾಯದೊಂದಿಗೆ ಅನೈತಿಕ ಸಂಬಂಧ, ಹೊಂದಿದ್ದರೆ ಅಂಥವರನ್ನು ಶಾಶ್ವತವಾಗಿ ಕುಲದಿಂದ ಬಹಿಷ್ಕರಿಸುತ್ತಾರೆ ಜೊತೆಗೆ ಹೆಣ್ಣು ಆಗಿದ್ದರೆ ಅವಳನ್ನು ತಲೆ ಬೋಳಿಸಿ ಮತ್ತು ಯಾರು ಅವಳನ್ನು ಮಾತನಾಡಿಸುವಂತಿಲ್ಲ. ಅವರನ್ನು ಯಾವುದೇ ಕ್ರಮದಿಂದ ಮರು ಸೇರ್ಪಡೆ ಮಾಡುವುದಿಲ್ಲ. ಕುಲದಿಂದ ಹೊರಗಡೆ ಈಡುವುದಕ್ಕೆ ಇವರಲ್ಲಿ 'ಎಲೆಹಾಕುವುದು' ಎಂದು ಕರೆಯುತ್ತಾರೆ. ಇಂದಿಗೂ ಜಗ್ಗಲಿಗರಲ್ಲಿ ಕಟ್ಟುಪಾಡುಗಳು ಉಳಿದುಕೊಂಡು ಬಂದಿದೆ. ಇವರಿಗೆ ಗಂಡು, ಹೆಣ್ಣುಗೆ ಒಂದೇ ರೀತಿಯಾ ದಂಡಗಳು ಇರುತ್ತವೇ ಎಂದು ಪ್ರಶ್ನೀಸಿದರೆ, ಅವರು ಹೇಳಿದ್ದು ಹೀಗೆ "ಗಂಡು ತಾಮ್ರದ ಚಂಬು ಇದ್ದಗೆ, ಹೆಣ್ಣು ಎಂದರೆ ಬೊಕಿ(ಮಣ್ಣಿನ ಮಡಿಕೆ)" ಎಂದು ಹೇಳುತ್ತಾರೆ. ಹೊಡೆದು ಹೋದರೆ ಯಾವುದಕ್ಕೂ ಬಳಕೆಗೆ ಬರುವುದಿಲ್ಲ ಎಂದು ಈ ತರಹದ ಲೋಕರೂಢಿ ಎಂದು ಹೇಳುತ್ತಾರೆ.

ಕೊನೆಯ ಮಾತು

ಅಲೆಮಾರಿಗಳಾದ ಜಗ್ಗಲಿಯರ ನ್ಯಾಯ ವ್ಯವಸ್ಥೆ ಅತೀ ಸರಳವಾಗಿದೆ ಅಷ್ಟೇ ಪರಿಣಾಮಕಾರಿಯು ಆಗಿದೆ. ಅಸಾಧ್ಯವಾದ ಪ್ರಕರಣಗಳನ್ನು ಕಟ್ಟೆಮನೆಗಳು ಬೇಧಿಸುತ್ತವೆ ಎಂದರೆ ಅದು ಇವರ ನ್ಯಾಯ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಈ ಸಮುದಾಯದಲ್ಲಿ ಶೇಕಡಾ ೧ ಪ್ರತಿಶತ ಸಮಸ್ಯೆಗಳು ಕೂಡ ನ್ಯಾಯಾಲಯದ ಮೆಟ್ಟಿಲೇರಿಲ್ಲ. ಉಳಿದ ಶೇಕಡಾ ೯೯ ಪ್ರತಿಶತ ನ್ಯಾಯಾ ಪಂಚಾಯಿತಿ ವ್ಯವಸ್ಥೆಯಡಿಯಲ್ಲಿ ಇತ್ಯರ್ಥವಾಗುರುತ್ತವೆ. ಒಂದು ವೇಳೆ ನ್ಯಾಯಾಲಯದ ಮಟ್ಟಕ್ಕೆ ಪ್ರಕರಣಗಳು ಇದ್ದರು ಅದು ಹೀಗೆ ದೈವದ ಮುಂದೆ ತೀರ್ಮಾಣವಾಗುತ್ತದೆ ಕೊನೆಗೂ ಸಂಧಾನವಾಗುತ್ತವೆ. ಒಟ್ಟಿನಲ್ಲಿ ಇವರ ಕಟ್ಟೆಮನೆಗೆ ದೇವರಿಗೆ ಕೊಡುವ ಸ್ಥಾನಮಾನಗಳನ್ನು

ಮಾನ್ಯ ಮಾಡಿ ನಿತ್ಯ ಬದುಕಿನಲ್ಲಿ ಯಾವುದೇ ಸಮಸ್ಯೆ ಎದುರಾಗದಂತೆ ಉತ್ತಮ ಜೀವನ ನಿರ್ವಹಣೆಗೆ ಕನಿಷ್ಠ ಸೌಲಭ್ಯಗಳನ್ನು ಒದಗಿಸಲು ಸಾಕಾರಗೊಳ್ಳಬೇಕಿದೆ.

ಪರಾಮರ್ಶನ ಗ್ರಂಥಗಳು

ಬೋರಲಿಂಗಯ್ಯ ಹಿ. ಚಿ. ಮತ್ತು ಪ್ರಭಾಕರ ಎ.ಎಸ್ (ಸಂ) ಕೆ.ಎಂ.ಮೇತ್ರಿ ಬುಡಕಟ್ಟು ನ್ಯಾಯ ವ್ಯವಸ್ಥೆ, ಪ್ರಸಾರಾಂಗ, ಕನ್ನಡ ವಿ,ಹಂ,೨೦೦೩

ಹಳ್ಳಿಕೇರಿ ಎಫ್.ಟಿ (ಸಂ) ರಂರಪ್ಪ ಡಿ. (ಲೇ)ಅಲೆಮಾರಿ ಕುರುಬರು, ಪ್ರಸಾರಾಂಗ ಕನ್ನಡ ವಿ,ಹಂ, ೨೦೧೦.

ಕಾಳೇಗೌಡ ನಗವಾರ ಪ್ರೋ. ಮತ್ತು ಹುಚ್ಚಪ್ಪ ಮಾಸ್ತರ್ ಎನ್. (ಸಂ) ಗಿರಿಜನ ಸಂಸ್ಕೃತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦

ಉಮೇಶ ಎಚ್.ಎಸ್ ಪ್ರೋ. (ಸಂ) ಅರುಹು ಕುರುವು, ಮೈಸೂರು, ೨೦೨೧.

ಬಾಬಾಸಾಹೇಬ್ ಅಂಬೇಡ್ಕರ್ ಬಿ.ಆರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು. ಸಂ.೦೩. ೦೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು,೨೦೧೮

ಬಾಬಾಸಾಹೇಬ್ ಅಂಬೇಡ್ಕರ್ ಬಿ.ಆರ್ , ಜಾತಿ ವ್ಯವಸ್ಥೆ: ಉಗಮ ವಿಕಾಸ ವಿನಾಶ, (ಕನ್ನಡಕ್ಕೆ: ರಾಹು.) ಸುಮೇಧ ಪ್ರಕಾಶನ, ಗುಲ್ಬರ್ಗಾ, ೨೦೧೦.

ಮರಟ್ಟಿ ಕೇಶವನ್ ಪ್ರಸಾದ್ ಕೆ. (ಸಂ), ಬುಡಕಟ್ಟು ಅಧ್ಯಯನ ಸಂಪುಟ-೫, ಸಂಚಿಕೆ-೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಡಿಸೆಂಬರ್ ೨೦೦೮.

ನಾಗರಾಜಯ್ಯ ವಿ ಹೆಚ್ "ಕರ್ನಾಟಕದ ಆದಿಜಾಂಬವ ಮಾತಂಗ ಪರಂಪರೆ: ಸಾಂಸ್ಕೃತಿಕ ವಿಶ್ಲೇಷಣೆ" ಪಿಎಚ್.ಡಿ ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೧೪.

ಆರಡಿಮಲ್ಲಯ್ಯ ಪಿ ಕಟ್ಟೇರ 'ಪರಿಶಿಷ್ಟ ಜಾತಿವರ್ಗಗಳ ಅಲೆಮಾರಿ, ಅರೆ ಅಲೆಮಾರಿ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳ ಅಧ್ಯಯನ'. ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ ಬೆಂಗಳೂರು, ೨೦೧೯

ಉಮೇಶ ಎಚ್.ಎಸ್, "ಅರುಹು ಕುರುಹು"(ಸಂ) ಅರುಹು ಕುರುಹು ತ್ರೈಮಾಸಿಕ ಪತ್ರಿಕೆ, ಮೈಸೂರು,೨೦೨೨.

ಇಂಗ್ಲೀಷ್ ಪುಸ್ತಕಗಳು

Edgar Thurston "Castes And Tribes Of Southern India" Volume-2,(C to J) Asian Educational Services New Delhi, Madras, 1987.

K.S. Singh, "PEOPLE OF INDIA ANDHRA PRADESH" Volume 8 Anthropological survey of india, New delhi 2003.

S C Bhatt and Gopal K. Bhargava "LAND AND PEOPLE " of Indian states and union territories, Volume 13, Kalpaz Publications, Delhi

ಪಿಎಚ್.ಡಿ. ಮಹಾಪ್ರಬಂಧ ಅಪ್ರಕಟಿತ

ಪಾಪಣ್ಣ ಬಿ. ೨೦೦೪, ನನ್ನಿವಾಳ, ಸುತ್ತಿನ ಮ್ಯಾಸಬೇಡರ ಹಟ್ಟಿಗಳು ಒಂದು ಸಾಂಸ್ಕೃತಿಕ ಅಧ್ಯಯನ ಕನ್ನಡ ವಿಶ್ವ ವಿದ್ಯಾಲಯ ಹಂಪಿ, ವಿದ್ಯಾರಣ್ಯ

ಮೋಹನ ಕುಮಾರ್ ಸಂ, ೨೦೦೯, ಬುಡಕಟ್ಟು ಸಮುದಾಯಗಳ ಸಂಘಟನೆ ಮತ್ತು ಸಹಬಾಳ್ವೆ, ಕನ್ನಡ ವಿಶ್ವ ವಿದ್ಯಾಲಯ ಹಂಪಿ, ವಿದ್ಯಾರಣ್ಯ

ಸಣ್ಣ ಓಬಯ್ಯ ಎಸ್ ಕೆ, ೨೦೦೨ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ, ಕನ್ನಡ ವಿಶ್ವ ವಿದ್ಯಾಲಯ ಹಂಪಿ, ವಿದ್ಯಾರಣ್ಯ